**ಹಿಂದೀ ಮೂಲ: ಮಾಲತಿ ಜೋಶಿ**
**ಕನ್ನಡಕ್ಕೆ: ಲೀಲಾ ನಾಯಿಕ**

# ಋಣಾನುಬಂಧ

ಟ್ರೇನು ಸ್ಟೇಶನ್ ತಲುಪಿದಾಗ ಒಂಬತ್ತು ಗಂಟೆಯಾಗಿ ಹೋಗಿತ್ತು. ದೀಪಕನಿಗೆ ತುಂಬ ಹಸಿವು. ಮನೆಗೆ ಹೋಗುವುದಕ್ಕೆ ಮೊದಲು ಹೋಟೆಲಿಗೆ ಹೋಗಿ ಏನಾದರೂ ತಿಂದುಕೊಂಡೇ ಹೋಗಲೇ ಎಂದು ಯೋಚಿಸಿದ. ಚಿಕ್ಕಮ್ಮ ಅಡಿಗೆ ಮಾಡಿಕೊಂಡು ನನಗಾಗಿ ಕಾಯುತ್ತಿದ್ದರೆ, ಊರಿಗೆ ಹೊರಡುವಾಗಲೇ 'ಊರಿಂದ ಬಂದ ನೀನು ನಮ್ಮೊಡನೆಯೆ ಊಟ ಮಾಡುವೆ. ನಾನು ಹೋಟೆಲಿಗೆ ಹೋಗಲು ಬಿಡುವುದಿಲ್ಲ' ಎಂದು ಹೇಳಿದ ನೆನಪಾಯಿತು. ಆದರೆ ಟ್ರೇನು ಎರಡೂವರೆ ಗಂಟೆ ತಡವಾಗಿ ಬರುವುದೆಂದು ಅವತ್ತು ಯಾರಿಗೆ ಗೊತ್ತಿತ್ತು. ಇಷ್ಟೊತ್ತಿನಲ್ಲಿ ಅವರಿಗೆ ಹೇಗೆ ತೊಂದರೆ ಕೊಡುವುದು– ನನ್ನ ದಾರಿ ನೋಡಿ ಅವರು ಮಲಗಿಬಿಟ್ಟಿದ್ದರೆ– ಉಪವಾಸ ಮಲಗಬೇಕಾಗುತ್ತದೇನೋ– ಒಂದು ವೇಳೆ ಅವರು ನನಗಾಗಿ ಕಾಯುತ್ತಿದ್ದರೂ... ನಾನು ತಿಂದು ಹೋಗುವದು ಚೆನ್ನಾಗಿರುವುದಿಲ್ಲ. ಹೋಟೆಲಿಗೆ ಹೋಗಲು ಮನಸ್ಸಾಗದೆ ಅವನು ಹಾಗೇ ಹೊರಟು ಬಿಟ್ಟ.

ಹೊರಗಡೆ ಹೋಗುವಾಗ ಯಾವತ್ತೂ ಬರೀಹೊಟ್ಟೆ, ಬರೀಕೈಯಲ್ಲಿ ಹೋಗಬಾರದೆಂದು ಅಮ್ಮ ಯಾವಾಗಲೂ ಹೇಳುತ್ತಿರುತ್ತಾರೆ. ಆದರೆ ಅತ್ತಿಗೆ ಅಷ್ಟು ಬೇಗ ಎದ್ದು ನನಗಾಗಿ ತಿಂಡಿ ಮಾಡಿಕೊಟ್ಟದ್ದೇ ಹೆಚ್ಚು. ಇನ್ನು ದಾರಿಗಾಗಿ ಏನಾದರೂ ಕಟ್ಟಿಕೊಡುವರೆಂಬ ಆಶೆ ಇಟ್ಟುಕೊಳ್ಳುವುದು ವ್ಯರ್ಥ. ಅಮ್ಮ ಅಡಿಗೆ ಮನೆಗೆ ಹೋಗಿ ಏನಾದರೂ ಮಾಡ ಹೋದರೆ ಅತ್ತಿಗೆಗೆ ಇಷ್ಟವಾಗುವುದಿಲ್ಲ. ತಿಂಡಿ ತಿಂದು ಹೊರಟಾಗ ಅಮ್ಮ ಯಾರಿಗೂ ಕಾಣದಂತೆ 'ದಾರಿಯಲ್ಲಿ ಏನಾದರೂ ತಿನ್ನು' ಎಂದು ಹತ್ತರ